Government College of Nursing, Fort. Bangalore-02.

Clinical-Instructor Posts Details.

Sl. No.	Name of the Staff Working in Clinical Instructor against post	From which Date	Remarks
1	Mr. Prasanna kumar	17.06/2008 till date (In Vacant Place)	
2	Mrs.G. Reddamma	16/04/2010 till date (In Place of vacant)	
3	Pushpa veni N.P	02/09/2010 till date (In Place of Sukanya)	Working in Lecturer Against post from 21/06/2008 to 01/09/2010
4	Mrs Suvarna B Talwar	11/06/2002 to 20/03/2012 (Now Vacant)	Promoted as Lecturer from 21/03/2012.
5	Mrs. Sukanya	31/05/2006 to 26/08/2010	Promoted as Lecturer from 27/08/2010
6	Vacant (One)		
		Sanctioned 4 Posts	

ಸಿ.ಇ.ಟಿ ಸೀಟುಗಳ ಹಂಚಿಕೆಯಲ್ಲಿ ನ್ಯಾಯಾಲಯ ಆದೇಶ ಪಾಲನೆ

214 (14) ಡಾ॥ ಮಹದೇವಪ್ಪ. ಹೆಚ್.ಸಿ. (ಟಿ.ನರಸೀಪುರ) ಮಾನ್ಯ ಉನ್ನತ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಸಿಇಟಿ ಸೀಟು ಹಂಚಿಕೆಯಲ್ಲಿ ಸುಪ್ರೀಂಕೋರ್ಟ್ ಆದೇಶವನ್ನು ಉಲ್ಲಂಘನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

(ಆ) ಜನರಲ್ ಮೆರಿಟ್ ವ್ಯಾಪ್ತಿಗೆ ಬರುವ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳನ್ನು ಮೀಸಲಾತಿ ಅಡಿಯಲ್ಲಿ ಪರಿಗಣಿಸಿ

ಇದೇ ವರ್ಗದ ಇತರೆ ಆಕಾಂಕ್ಷಿಗಳಿಗೆ ಅನ್ಯಾಯವಾಗುತ್ತಿದ್ದು, ಇದು ಸುಪ್ರೀಂಕೋರ್ಟ್ ಆದೇಶದ ಸ್ಪಷ್ಟ ಉಲ್ಲಂಘನೆಯಾಗುತ್ತಿದ್ದರೂ ಸಹ ಸರ್ಕಾರ ಸೂಕ್ತ ಕ್ರಮಕೈಗೊಳ್ಳದೆ ಇರಲು ಕಾರಣವೇನು; (ವಿವರ ಒದಗಿಸುವುದು)

(ಇ) ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ನಡೆಸಲಾದ ವೈದ್ಯಕೀಯ ಶಿಕ್ಷಣ ಸೀಟ್ ಹಂಚಿಕೆ ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ನೀಡಿ ಮೀಸಲಾತಿ ಸೌಲಭ್ಯದಲ್ಲಿ ಸೀಟು ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ; ಈ ಬಗ್ಗೆ ಏನು ಶಿಸ್ತು ಕ್ರಮ ಕೈಗೊಳ್ಳಲಾಗಿದೆ? (ಮಾಹಿತಿ ಒದಗಿಸುವುದು)

ಶ್ರೀ ಸಿ.ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು)

(ಅ) ಇಲ್ಲ.

(ಆ) ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಸೀಟು ಹಂಚಿಕೆಯು Act No. 23/2012 ರಲ್ಲಿರುವ ಉಪಬಂಧ 5 ಹಾಗೂ " Karnataka Selection of Candidates for Admission to Government seats in Professional Educational Institutions Rules, 2006ರ ನಿಯಮಗಳನ್ವಯ ವೃತ್ತಿ ಶಿಕ್ಷಣ ಕೋರ್ಸುಗಳಲ್ಲಿ ಸರ್ಕಾರಿ ಕೋಟಾದಡಿ ಹಂಚಿಕೆಗೆ ಲಭ್ಯವಿರುವ ಒಟ್ಟು ಸೀಟುಗಳಲ್ಲಿ ವಿಶೇಷ ಪ್ರವರ್ಗಗಳಿಗೆ ಮೀಸಲಿಡಲಾದ ಒಟ್ಟು ಸೀಟುಗಳನ್ನು ಕಳೆದು, ಉಳಿದ ಸೀಟುಗಳಿಗೆ ಸರ್ಕಾರದ ಆದೇಶ ನಂ. ಎಸ್‌ಡಬ್ಲ್ಯೂಎಲ್ 251 ಬಿಸಿಎ 94 ದಿನಾಂಕ 31-01-1995 ಹಾಗೂ ಅದಕ್ಕೆ ಕಾಲಕಾಲಕ್ಕೆ ತರಲಾದ ತಿದ್ದುಪಡಿಗಳ ಹಿನ್ನೆಲೆಯಲ್ಲಿ ಪ.ಜಾ/ಪಂ.ಪಂಗಡ/ಪವರ್ಗ-1/2ಎ,2ಬಿ,3ಎ,3ಬಿ ಪ್ರವರ್ಗಗಳಿಗೆ ಸದರಿ ಆದೇಶದಲ್ಲಿ ತಿಳಿಸಿರುವ ಪ್ರಮಾಣದಲ್ಲಿ ಮೀಸಲಾತಿ ಕಲ್ಪಿಸಿ ಅದರಂತೆ ಸೀಟು ಹಂಚಿಕೆ ಮಾಡಲಾಗುತ್ತಿದೆ. ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಕೋರ್ಸುಗಳ ಸೀಟುಗಳ ಹಂಚಿಕೆಯಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸರ್ಕಾರದ ಮೀಸಲಾತಿ ನೀತಿಯನ್ನಾಗಲೀ ಅಥವಾ ಮೀಸಲಾತಿ ಜಾರಿ ಬಗ್ಗೆ ಸುಪ್ರೀಂಕೋರ್ಟ್ ಕಾಲಕಾಲಕ್ಕೆ ನೀಡಿರುವ ಯಾವುದೇ ಆದೇಶವನ್ನು ಉಲ್ಲಂಘಿಸಿರುವುದಿಲ್ಲ.

(ಇ) ಬಂದಿದೆ. ಕಳೆದ ಸಾಲಿನಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿ ವೈದ್ಯಕೀಯ ಸೀಟು ಪಡೆದಿರುವ ಎರಡು ಪ್ರಕರಣಗಳು ವರದಿಯಾಗಿದ್ದು (ಒಂದು ಕೋಲಾರ ಜಿಲ್ಲೆ, ಒಂದು ಗುಲ್ಬರ್ಗಾ ಜಿಲ್ಲೆ) ಈ ಎರಡೂ ಪ್ರಕರಣಗಳಲ್ಲಿ ಆಯಾ ಜಿಲ್ಲಾಧಿಕಾರಿಗಳಿಗೆ

ಪರಿಶೀಲಿಸಿ ವರದಿ ಕಳುಹಿಸಿಕೊಡುವಂತೆ ಕೋರಲಾಗಿದೆ. ಜಿಲ್ಲಾಧಿಕಾರಿಗಳಿಂದ ವರದಿ ಬಾಕಿ ಇರುತ್ತದೆ. ಸಮಾಜ ಕಲ್ಯಾಣ ಇಲಾಖೆ ನೀಡಿರುವ ಸುತ್ತೋಲೆ ನಂ. ಎಸ್‌ಡಬ್ಲ್ಯೂಡಿ 155 ಬಿಸಿಎ 2012 ದಿನಾಂಕ: 22-02-2012ರಂತೆ ಅಭ್ಯರ್ಥಿಗಳಿಗೆ ನೀಡಲಾದ ಜಾತಿ ಪ್ರಮಾಣ ಪತ್ರ ಅವುಗಳು ರದ್ದಾಗುವವರೆಗೂ ಜಾರಿಯಲ್ಲಿರುತ್ತದೆ. ಅಂದರೆ ಜಿಲ್ಲಾಧಿಕಾರಿಗಳಿಂದ ವರದಿ ಬಾಕಿ ಇರುವ ಈ ಎರಡೂ ಪ್ರಕರಣಗಳಲ್ಲಿ ಸಂಬಂಧಿಸಿದ ತಹಸೀಲ್ದಾರ್ ಅವರು ನೀಡಿರುವ ಜಾತಿ ಪ್ರಮಾಣ ಪತ್ರ ರದ್ದಾದ ನಂತರ ಮಾತ್ರವೇ ಅವರುಗಳಿಗೆ ಹಂಚಿಕೆ ಮಾಡಿರುವ ಮೆಡಿಕಲ್ ಸೀಟುಗಳನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅವರು ಸಿಇಟಿ ಪ್ರವೇಶ ನಿಯಮಾವಳಿಗಳು, 2006ರ ನಿಯಮ 13ರ ಅನ್ವಯ ರದ್ದು ಮಾಡಲು ಕ್ರಮಕೈಗೊಳ್ಳಲಾಗುವುದು.

ಮುಜರಾಯಿ ಇಲಾಖೆಯಿಂದ ಮಂಜೂರಾದ ಅನುದಾನ

268 (545) ಶ್ರೀ ಪ್ರತಾಪಗೌಡ ಪಾಟೀಲ್ :- ಮಾನ್ಯ ಮುಜರಾಯಿ ಹಾಗೂ ಬಂದರು, ಒಳನಾಡು ಜಲಸಾರಿಗೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ಮುಜರಾಯಿ ಇಲಾಖೆಯಿಂದ 2008 ರಿಂದ 2012ರವರೆಗೆ ರಾಯಚೂರು ಜಿಲ್ಲೆಗೆ ಮಂಜೂರಾದ ಅನುದಾನವೆಷ್ಟು; (ಮಾಹಿತಿ ನೀಡುವುದು)

(ಆ) ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 2008 ರಿಂದ 2012ರವರೆಗೆ ಕೊಟ್ಟಿರುವ ಅನುದಾನವೆಷ್ಟು? (ಸಂಪೂರ್ಣ ಮಾಹಿತಿ ನೀಡುವುದು)

ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಮಾನ್ಯ ಮುಜರಾಯಿ ಹಾಗೂ ಬಂದರು, ಒಳನಾಡು ಜಲಸಾರಿಗೆ ಸಚಿವರು)

(ಅ)	ಕ್ರ.ಸಂ.	ವರ್ಷ	ಸಂಸ್ಥೆ	(`ಲಕ್ಷಗಳಲ್ಲಿ)
	1	2008-09	43	218.00
	2	2009-10	3	5.90
	3	2010-11	28	59.50
	4	2011-12	134	208.80

(ಆ) ಆ ಸಂಬಂಧ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.